ಶ್ರೀ ವಾಟಾಳ್ ನಾಗರಾಜ್ : ಗ್ರಾಮೀಣಾಭಿವೃದ್ಧಿ ಸಚಿವರು ದಯಮಾಡಿಸಿದ್ದಾರೆ.

ಉಪಾಧ್ಯಕ್ಷಣೆಯವರು : ನಾನು ಈಗ ಮಾನ್ಯ ಏಕಾಂತಯ್ಯನವರನ್ನು ಕರೆದಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತು ತಾವು ಸ್ಟೇಟ್‌ಮೆಂಟ್ ಕೊಡುತ್ತೇವೆ ಎಂದು ಹೇಳಿದ್ದೀರಿ. ಮೂರು ವಿಚಾರದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಂಸದೀಯ ಸಚಿವರು ದಯಮಾಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ನಾಗರಾಜ್ ಅವರೇ, ಬೆಳಿಗ್ಗೆ ಆಶ್ವಾಸನೆ ಕೊಟ್ಟ ಪ್ರಕಾರ ಎಲ್ಲಾ ಹೇಳಿಕೆಗಳನ್ನು ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಆದರೆ ಬಿಲ್ಸ್ ಸ್ವಲ್ಪ ಆಗಲಿ ಎಂದು.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ನಮ್ಮ ವಿರೋಧ ಇಲ್ಲ, ಮಾನ್ಯ ಕೆ.ಹೆಚ್. ಪಾಟೀಲರು ದಯಮಾಡಿಸಿದ್ದಾರೆ. ಅವರು ಹೇಳಿಕೆ ಕೊಡುವುದಕ್ಕೆ ತಯಾರಾಗಿ ಬಂದಿದ್ದಾರೆ. ಅವರು ಹೇಳಿಕೆ ಕೊಟ್ಟು ಬಿಟ್ಟರೆ ನಮಗೆ ಸಮಾಧಾನ ಆಗುತ್ತದೆ.

ಉಪಾಧ್ಯಕ್ಷಣೆಯವರು : ಮಾನ್ಯ ಏಕಾಂತಯ್ಯನವರು ಈಗ ತಾವು ಮುಂದುವರಿಸಿ ಸ್ಟೇಟ್‌ಮೆಂಟ್ ಆಮೇಲೆ ಮಾಡುತ್ತಾರೆ.

ಜಿಲ್ಲಾಪರಿಷತ್ ಚುನಾವಣೆಗಳನ್ನು ನಡೆಸುವ ಬಗ್ಗೆ

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಉಪಾಧ್ಯಕ್ಷಣೆಯವರೇ, ತಮ್ಮ ಪರವಾನಗಿಯನ್ನು ಪಡೆದು ಮಾನ್ಯ ಸದಸ್ಯರ ಮನಸ್ಸಿನಲ್ಲಿರುವ ಸಂಕೋಚ ನಿವಾರಣೆಗಾಗಿ ಒಂದು ಮಾತನ್ನು ಹೇಳುತ್ತೇನೆ. ಬಜೆಟ್ ಅಧಿವೇಶನದ ಕಾಲಕ್ಕೆ ಒಂದು ಮಾತು ಹೇಳಿದ್ದು ಅವರಿಗೆ ನೆನಪು ಇರಬಹುದು. ನಾನು ಏನು ಹೇಳಿದ್ದೆ ಅಂದರೆ ಇದೇ ಸದನದಲ್ಲಿ ಒಂದು ಬಿಲ್ಲನ್ನು ಇಡುತ್ತೇನೆ ಆ ಬಿಲ್ ಪಾಸ್ ಆದ ನಂತರ ನಾನು ಚುನಾವಣೆ ಬಗ್ಗೆ ವಿಚಾರ ಮಾಡುತ್ತೇನೆ ಎಂದು. ಬಿಲ್ ಪಾಸ್ ಆಗುವ ತನಕ ಚುನಾವಣೆ ಎಂದು ಆಗುತ್ತದೆ ಎಂದು ಹೇಳುವುದಕ್ಕೆ ಬರುವುದಿಲ್ಲ ಎಂಬ ಮಾತು ಹೇಳಿದ್ದೇನೆ. ಅದನ್ನೇ ಪೇಪರ್‌ನವರು ಬಂದು ಕೇಳಿದಾಗ ಹೇಳಿದ್ದೇನೆ. ನಾನಾಗಿಯೇ ಹೇಳುವುದಕ್ಕೆ ಹೋಗಿಲ್ಲ, ಪೇಪರ್‌ನವರು ಬಂದು ಕ್ಲಾರಿಫಿಕೇಶನ್ ಕೇಳಿದಾಗ ಹೇಳಿದ್ದೇನೆ. ಅದಕ್ಕಾಗಿ ತಮ್ಮ ಮನಸ್ಸಿಗೆ ನೋವಾಗಿದ್ದರೆ, ಕ್ಷಮೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನಾವು ಕ್ಷಮಾಪಣೆ ತಮ್ಮಿಂದ ಕೇಳುತ್ತಾ ಇಲ್ಲ. ಒಂದು ಸ್ಪಷ್ಟತೆ ಬೇಕು-ಚುನಾವಣೆ ಮಾಡುತ್ತೀರಾ ಅಥವಾ ಇಲ್ಲವೇ ಎಂದು. ನಾವು ತಮ್ಮ ಕ್ಷಮೆ ಕೇಳಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್ : ಚುನಾವಣೆ ಆಗಬೇಕಾದರೆ ಟೈಮ್ ಬೇಕು. ಆ ಟೈಮ್ ಆಗುವ ತನಕ ಅಡ್ಮಿನಿಸ್ಟ್ರೇಟರ್ ಹಾಕುವುದು ಅನಿವಾರ್ಯ ಆಗುತ್ತದೆ. ಅದಕ್ಕಾಗಿ ಅನಿವಾರ್ಯವಾಗಿ ಆರ್ಡಿನೆನ್ಸ್ ತರಬೇಕಾಗುತ್ತದೆ. ನೀವೇ ವಿಚಾರ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಆಡಳಿತ ಅಧಿಕಾರಿ ನೇಮಕ ಎಂದರೆ ಚುನಾವಣೆ ಇಲ್ಲ ಎಂದರ್ಥ.

ಶ್ರೀ ಕೆ.ಹೆಚ್. ಪಾಟೀಲ್ : ಚುನಾವಣೆ ಇಲ್ಲ ಎಂತಲ್ಲ. ಡಿಸೆಂಬರ್‌ಗೆ ಆಗಬಹುದು, ಜನವರಿಗೆ ಆಗಬಹುದು, ಜೂನ್‌ಗೆ ಆಗಬಹುದು ಚುನಾವಣೆ ಆಗಲೇಬೇಕು.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿ. ಚುನಾವಣೆ ಆಗುವವರೆಗೆ ಅಡ್ಮಿನಿಷ್ಟ್ರೇಟರ್ ಅವರನ್ನು ಹಾಕುತ್ತೀರಿ. ಯಾವಾಗ ಚುನಾವಣೆ ಮಾಡುತ್ತೇವೆ ಎಂಬುದನ್ನು ಹೇಳುವುದಿಲ್ಲ ಅಂದರೆ ಹೇಗೆ? ಸುಮ್ಮನೇ ಚುನಾವಣೆ ಮಾಡುತ್ತೇವೆ ಎಂದು ಹೇಳಿದರೆ ಏನರ್ಥ?

ಶ್ರೀ ಕೆ.ಹೆಚ್. ಪಾಟೀಲ್ : ಮುಂದಕ್ಕೆ ಆಗುವುದನ್ನು ಈವತ್ತು ಜ್ಯೋತಿಷ್ಯ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್ : ಅಡ್ಮಿನಿಸ್ಟ್ರೇಟರ್ ಅನ್ನು ಹಾಕುತ್ತೇವೆ ಎಂದರೆ ಏನರ್ಥ? ಸಕಾಲದಲ್ಲಿ ಚುನಾವಣೆ ಮಾಡುತ್ತೇವೆ ಎಂದರೆ ಸರಿ.. ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕುತ್ತೇವೆ ಎಂದರೆ ಚುನಾವಣೆ ಮುಂದಕ್ಕೆ ಹಾಕುತ್ತೇವೆ ಎಂದು ಅರ್ಥವಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್ : ನಾನು ಹೇಳುವುದನ್ನು ಕೇಳಿ. ನಾಳೆ ಇನ್ನೊಮ್ಮೆ ಒಂದು ತಿಂಗಳಿಗೆ ಅಸೆಂಬ್ಲಿ ಕೂಡುತ್ತೇವೆಂದು ತಿಳಿದುಕೊಳ್ಳಿ. ಆಗ ಅಸೆಂಬ್ಲಿಯಲ್ಲಿ ಬಿಲ್ ಇಡುತ್ತೇವೆ. ಬಿಲ್ ಇಟ್ಟಾದ ಮೇಲೆ ಈವತ್ತೇ ಮಾಡಬೇಕು ಎಂದರೆ ಆವತ್ತೇ ಮಾಡುತ್ತೇವೆ ಮುಂದಕ್ಕೆ ಹಾಕಬೇಕು ಎಂದರೆ ಮುಂದಕ್ಕೆ ಹಾಕುತ್ತೇವೆ. ಒಟ್ಟಾರೆಯಾಗಿ ಚುನಾವಣೆ ಆಗುತ್ತದೆ. ಚುನಾವಣೆ ಡಿಸೆಂಬರ್‌ಗೆ ಆಗುತ್ತದೆಯೋ ಅಥವಾ ಜೂನ್‌ಗೆ ಆಗುತ್ತದೆಯೋ ಗೊತ್ತಿಲ್ಲ. ಯಾವುದೇ ಒಂದು ಸಂದರ್ಭದಲ್ಲಿ ಚುನಾವಣೆ ಮಾಡುತ್ತೇವೆ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಮಂತ್ರಿಗಳು ಈಗತಾನೇ ಹೇಳಿದರು, ಚುನಾವಣೆ ಮಾಡುತ್ತೇವೆ ಎಂದು ಬಹಳ ಸಂತೋಷ. ನಿಯಮ 64....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮಗಂತೂ ಸಂತೋಷ ಇಲ್ಲ...

ಶ್ರೀ ಆರ್.ಎಲ್. ಜಾಲಪ್ಪ : ತಮ್ಮ ಕೈಯಲ್ಲಿ ಚುನಾವಣೆ ಮಾಡುವುದಕ್ಕೆ ಆಗಲಿಲ್ಲ. ಇದು ದುರಾದೃಷ್ಟ.

(ಗೊಂದಲ)

ಉಪಾಧ್ಯಕ್ಷಣಿಯವರು : ಮಾನ್ಯ ವೆಂಕಟಪ್ಪನವರು ಏನೋ ಹೇಳುತ್ತಿದ್ದಾರೆ. ಅವರು ಹೇಳಿದ ಮೇಲೆ ತಾವು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಚುನಾವಣೆ ಮುಂದಕ್ಕೆ ಹಾಕುವುದನ್ನು ಅವರು ಒಪ್ಪಿಕೊಂಡರು. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ..

ಶ್ರೀ ಎಂ.ಪಿ. ವೆಂಕಟಪ್ಪ : ಇದು ಎಲ್ಲರಿಗೂ ಸಂಬಂಧಪಟ್ಟರತಕ್ಕ ವಿಷಯ. ನನಗೆ ಒಂದು ಕ್ಲಾರಿಫಿಕೇಷನ್ ಬೇಕು.

ಶ್ರೀ ವಾಟಾಳ್ ನಾಗರಾಜ್ : ಒಂದು ಪ್ರಶ್ನೆ ತಮ್ಮಲ್ಲಿ ಕೇಳುತ್ತೇನೆ ಮಾನ್ಯ ಸಚಿವರಲ್ಲಿ ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಶ್ರೀಮಾನ್ ಕೆ.ಹೆಚ್. ಪಾಟೀಲರು ಪ್ರಜಾಪ್ರಭುತ್ವದ ಬಗ್ಗೆ ಅಪಾರವಾದ ಗೌರವ. ನಂಬಿಕೆ ಇಟ್ಟುಕೊಂಡಿರತಕ್ಕವರು.

ಜಿಲ್ಲಾ ಪರಿಷತ್ತಿನ ವ್ಯವಸ್ಥೆಗಳ ಬಗ್ಗೆ ತಿದ್ದುಪಡಿ ತಂದು ಒಂದು ಹೊಸ ರೂಪ ಕೊಡಬೇಕೆಂದು ವಿಚಾರ ಧಾರೆಯನ್ನು ಇಟ್ಟುಕೊಂಡಿರತಕ್ಕವರು. ಇಷ್ಟರಲ್ಲೇ ಇವೆಲ್ಲಾ ಬರಬೇಕಾಗಿತ್ತು. ಯಾವುದೇ ಬರದೇ ಇರುವುದರಿಂದ ನನಗೆ ಅನಿಸುತ್ತದೆ. ಅವರ ಮನಸ್ಸಿಗೆ ಇದು ಒಪ್ಪಿಗೆ ಆಗುತ್ತಾ ಎಂದು. ಇವತ್ತು ಯಾವುದೇ ಚುನಾವಣೆಯನ್ನು ಒಂಬತ್ತು ತಿಂಗಳು, ಎರಡು ತಿಂಗಳು ಮುಂದೆ ಹಾಕತಕ್ಕೆ ನೀತಿ ಇದೆಯಲ್ಲಾ ಇದು ಅವರ ಮನಸ್ಸಿಗೆ ಒಪ್ಪಿಗೆ ಆಗುತ್ತದೆಯೇ? ಒಪ್ಪಿಗೆ ಆಗುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಯಾವ ಒಂದು ಸಂಕಷ್ಟಕ್ಕೆ ಯಾವ ಒಂದು ಹಿಡಿತಕ್ಕೆ ತಾವು ಸಿಕ್ಕಿದ್ದಿರಿ. ಇದನ್ನು ಹೇಳುವುದಕ್ಕೆ ತಮಗೆ ಸ್ವತಂತ್ರ ಇಲ್ಲವೇ? ಬಹಿರಂಗವಾಗಿ ಚುನಾವಣೆಯನ್ನು ಇಂತಹ ತಾರೀಖಿನಂದು ಮಾಡುತ್ತೇವೆ. ಡಿಸೆಂಬರ್‌ಗೋ ಅಥವಾ ಅದಕ್ಕೂ ಮೊದಲು ಮಾಡುತ್ತೇವೆ ಎಂದು ಹೇಳಿ. ಐದು ವರ್ಷದ ಪ್ರಾರಂಭದಲ್ಲಿಯೇ ಈ ಅವಸ್ಥೆಗೆ ಬರಬಾರದು. ಯಾವ ಒಂದು ಸದುದ್ದೇಶವನ್ನು ಇಟ್ಟುಕೊಂಡು ಮಾನ್ಯ ನಜೀರ್ ಸಾಬ್ ಅವರು ಈ ಒಂದು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಯನ್ನು ತಂದರು. ಇದು ಒಂದು ಅವಧಿಗೆ ಅವಸಾನ ಆಗಬಾರದು. ಅವಸಾನದ ಅರಿವಿನಲ್ಲಿ ಇದು ಹೋಗುತ್ತಿದೆ. ಆ ಕೆಟ್ಟ ಹೆಸರು ಮಾನ್ಯ ಕೆ.ಹೆಚ್. ಪಾಟೀಲರಿಗೆ ಬರಬಾರದು.

ಶ್ರೀ ಕೆ.ಹೆಚ್. ಪಾಟೀಲ್ : ನನ್ನ ಉದ್ದೇಶವೂ ಸಹಿತ ಚುನಾವಣೆಗಳು ಲಘುವಾಗಿ, ಬೇಗನೆ ಆಗಬೇಕೆಂದು ಇದೆ. ಅದರಂತೆ ಒಂದು ಪ್ರತಿಯನ್ನು ನೇರವಾಗಿ ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೇನೆ.. ಹಾಗೆಯೇ ಒಂದು ಪ್ರತಿಯನ್ನು ಸಚಿವ ಸಂಪುಟಕ್ಕೂ ಕಳುಹಿಸಿದ್ದೇನೆ. ಒಂದು ಪ್ರತಿಯನ್ನು ನಮ್ಮ ಪಾರ್ಟಿಯ ಎದುರಿಗೆ ಇಟ್ಟಿದ್ದೇನೆ. ಈ ಮೂರೂ ಇಟ್ಟು ಅದು ಅದಕೂಡಲೇ ತರಬೇಕೆಂದು ನನ್ನ ಇಚ್ಛೆ. ಇದೇ ಸದನದಲ್ಲಿ ಅದನ್ನು ತರಬೇಕೆಂದು ನನ್ನ ಇಚ್ಛೆಯಾಗಿತ್ತು. ಆದರೆ ಈಗ ಬಂದಿಲ್ಲ. ಮುಂದಿನ ಸಾರಿ ಈ ತಿಂಗಳ ಬಿಟ್ಟು ಮುಂದಿನ ಅಥವಾ ಈ ಎರಡು ತಿಂಗಳಲ್ಲಿ ಸಭೆ ಸೇರಿದಾಗ ಆಗ ಅದನ್ನು ಇಲ್ಲಿ ತಂದು ಮಾಡೋಣ. ಒಂದು ವೇಳೆ ಅದು ಆಗಲೇ ಇಲ್ಲ ಅಂದರೆ ಅದಕ್ಕೆ ಆರ್ಡಿನೆನ್ಸ್ ಹೊರಡಿಸುವುದು ಅನಿವಾರ್ಯವಾಗುತ್ತದೆ. ಅದಕ್ಕೆ ಮತ್ತೊಮ್ಮೆ ಇಲ್ಲ ಎಂದು ಹೇಳಬಾರದು. ಆರ್ಡಿನೆನ್ಸ್ ಅದರೂ ಕೂಡ ಎಷ್ಟರಮಟ್ಟಿಗೆ ನಾವು ಮಾಡುತ್ತೇವೆ?

ಶ್ರೀ ಡಿ.ಬಿ. ಚಂದ್ರೇಗೌಡ : ಈ ಮಸೂದೆಯಲ್ಲಿ ಚುನಾವಣೆಗಳನ್ನು ಮುಂದೆ ಹಾಕುವುದಕ್ಕೆ ಅವಕಾಶ ಇಲ್ಲ. ಈಗ ಇರತಕ್ಕಂಥ ಮಸೂದೆಯನ್ನು ಅದು ಇಲ್ಲ. ಆದ್ದರಿಂದ ನೀವು ಅಮೆಂಡ್‌ಮೆಂಟ್ ಅನ್ನು ತರುವುದಾಗಿದ್ದರೆ ಈ ಅಧಿವೇಶನದಲ್ಲಿ ತರಬೇಕಾಗಿತ್ತು. ಈ ಅಧಿವೇಶನದಲ್ಲಿ ಅಮೆಂಡ್‌ಮೆಂಟ್ ಬರಲಿಲ್ಲ ಅಂದರೆ, ಮಸೂದೆ ಹಾಗೆಯೇ ಇದೆ, ಅವಧಿ ಡಿಸೆಂಬರ್ ತಿಂಗಳಿಗೆ ಮುಗಿಯುತ್ತದೆ. ಆದಕ್ಕೆ ಮುಂದೆ ಚುನಾವಣೆಯಾಗಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಚಂದ್ರೇಗೌಡರವರೇ, ಈ ಸಂಗತಿಯನ್ನು ನಾನು ವಿಚಾರಮಾಡಿ ಇದಕ್ಕೆ ಬೇಗ ಬಿಲ್ ಆಗಬೇಕು ಎಂದು ಯೋಚನೆ ಮಾಡಿದ್ದೇನೆ. ಜನವರಿಯೊಳಗೆ ನೀವು ಆ ಬಿಲ್‌ನ್ನು ಪಾಸ್ ಮಾಡಿದರೆ, ಮತ್ತೆ ಒಂದು ತಿಂಗಳೊಳಗೆ ಇಲೆಕ್ಷನ್ ಆಗಬೇಕಾಗುತ್ತದೆ. ಅದಕ್ಕಾಗಿ ಅದನ್ನು ಮನಸ್ಸಿಲ್ಲಿಟ್ಟುಕೊಂಡು, ಈ ಹೊಸ ಆಕ್ಟ್ ಬರುವುದರಿಂದ ಮತ್ತು ಹೊಸ ಕಾನ್ಸಿಟ್ಯೂಷನ್ ಪ್ರಕಾರ ಬಿಲ್ ಬರುವುದರಿಂದ ಚುನಾವಣೆಯು ಪರ್ಮನೆಂಟ್

ಆಗಬೇಕೆಂಬ ದೃಷ್ಟಿ ಇಟ್ಟುಕೊಂಡು ಮಾಡುತ್ತೇನೆ. ಆದ್ದರಿಂದ ಯಾವುದು ಸೂಕ್ತವೋ ಅದನ್ನು ಮಾಡಬೇಕು. ನೀವು ಹೇಳಿದ ಹಾಗೆ ಈಗ ಇದ್ದ ಬಿಲ್ಲೂ ಕೂಡ ಆಗಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಇರತಕ್ಕಂಥ ಮಸ್ಸೂದೆಯಲ್ಲಿ ದೋಷಗಳು ಇವೆ, ಅವನ್ನು ಬದಲಾವಣೆ ಮಾಡುತ್ತೇವೆ ಎಂದು ನಿಮ್ಮ ಸರಕಾರವು ಅಧಿಕಾರಕ್ಕೆ ಬಂದಾಗಿನಿಂದಲೂ ಇದುವರೆಗೆ ಹೇಳುತ್ತಾ ಇದ್ದೀರಿ. ಈಗ ಹೊಸದಾಗಿ ಏನು ಹೇಳುತ್ತಿದ್ದೀರಿ, ಕ್ಯಾಬಿನೆಟ್ ಮುಂದೆ ಇಟ್ಟಿದ್ದೇನೆ. ಪಾರ್ಟಿ ಮುಂದೆ ಇಟ್ಟಿದ್ದೇನೆ. ಜನರ ಮುಂದೆ ಇಟ್ಟಿದ್ದೇನೆ, ಶಾಸನಸಭೆಯ ಮುಂದೆ ಇಟ್ಟಿದ್ದೇನೆ, ಕೇಂದ್ರ ಸರಕಾರಕ್ಕೆ ಕಳುಹಿಸಿದ್ದೇನೆ ಎಂದು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಆಂದರೆ, ಇರುವ ಶಾಸನದಲ್ಲಿ ಅವಧಿಯನ್ನು ಮುಂದಕ್ಕೆ ಹಾಕುವುದಕ್ಕೆ ನಿಮಗೆ ಅವಕಾಶ ಇಲ್ಲ. ಮುಂದೆ ಈ ಮಸೂದೆಯು ಏನಾಗುತ್ತದೆಯೋ ಅದು ನನಗೆ ಗೊತ್ತಿಲ್ಲ. ನಿಮ್ಮ ಸರಕಾರ ಇರುತ್ತದೋ, ನಿಮಗೆ ಅಮೆಂಡ್‌ಮೆಂಟ್ಸ್ ಮಾಡುವುದಕ್ಕೆ ಅವಕಾಶ ಸಿಗುತ್ತದೋ? ಅಥವಾ ಈ ಶಾಸನ ಸಭೆ ಇರುತ್ತದೋ ಇಲ್ಲವೋ, ಯಾವುದೂ ನಿಶ್ಚಿತವಿಲ್ಲ, ಆದ್ದರಿಂದ ಇರತಕ್ಕಂಥ ಶಾಸನವನ್ನು ಜಾರಿಗೆ ಕೊಡುತ್ತೀರೋ ಇಲ್ಲವೋ? ಅದನ್ನು ಹೇಳಿ, ಮುಂದೆ ನೀವು ಏನು ಮಾಡುತ್ತೀರಿ? ಎನ್ನುವ ಪ್ರಶ್ನೆ ಬೇರೆ. ಇರುವ ಶಾಸನವನ್ನು ಜಾರಿಗೆ ಕೊಡುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಈ ಶಾಸನವನ್ನು ಜಾರಿಗೆ ಕೊಡುವುದಕ್ಕೆ ಬರಲಾರದ ಪರಿಸ್ಥಿತಿಯೊಳಗೆ ನಾವು ಬಂದಿದ್ದೇವೆ. ಏಕೆಂದರೆ ಇವೆಲ್ಲಾ ಕಾನ್ಸ್ಟಿಟ್ಯೂಶನ್ಸ್ ತಯಾರಾಗ ಬೇಕಾದರೆ ನಾಲ್ಕು ತಿಂಗಳಾದರೂ ಬೇಕು. ಆದರೆ ನಾಲ್ಕು ತಿಂಗಳು ಟೈಮ್ ಇಲ್ಲ, ಡಿಸೆಂಬರ್‌ರೊಳಗಾಗಿ ಆಗಬೇಕು. We are at the fag end of October.

SRI D.B. CHANDREGOWDA : Why do you thind of the new delimitation of constitutencies? Constitutiences have already been delimited. Demarcation is over, Composition is over, Constitution is over.

SRI K.H. PATIL : According to the new environment. according to the new pattern, when the Constitution has been amended, when you yourself have welcomes the 64th amendment and even based on your suggestions, 64th amendment was amended to suit 72 amendment. ಆದರ ಪ್ರಕಾರ ನಾವು ಆಕ್ಟ್ ಮಾಡಬೇಕಾಗುತ್ತದೆ. ಅದನ್ನು ಸ್ವಲ್ಪ ಲಕ್ಷದೊಳಗಿಟ್ಟುಕೊಂಡು in the interest of democracy, and in order to keep up good spirit in democratic institutions you please bear for a month or two...

ಶ್ರೀ ಡಿ.ಬಿ. ಚಂದ್ರೇಗೌಡ : ತೆಲುಗಿನಲ್ಲಿ ಒಂದು ಗಾದೆ ಇದೆ. ಗುರುವಿನ ಮಿಂಚಿನ ಶಿಷ್ಯುಡು ಎಂದು ಹೇಳುತ್ತಾರೆ. ಶಿಷ್ಯ ತಯಾರು ಮಾಡಿದಂಥ ಮಸೂದೆಯನ್ನು ಗುರುಗಳು ಬದಲಾವಣೆ ಮಾಡತಕ್ಕಂಥ ಪ್ರಯತ್ನಕ್ಕೆ ನೀವು ಏತಕ್ಕೆ ಹೋಗುತ್ತೀರಿ? ನೀವು ಇರುವ ಶಾಸನವನ್ನು ಜಾರಿಗೆ ಕೊಡಿ. ಅದು ಜನತಾಂತ್ರಿಕವಾಗಿ ಇಲ್ಲವೆನ್ನುವುದಾದರೆ, ಮುಂದೆ ಚುನಾವಣೆಯಾದ ಮೇಲೆ ಅದನ್ನು ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲವೇನು? ಈಗ ಇರತಕ್ಕಂಥ ಚುನಾವಣೆ

ಬಹಳ ದೀರ್ಘವಾಗಿ ಚರ್ಚೆಯಾಗಿ ಜಂಟಿಸಲಹಾ ಸಮಿತಿಗೆ ಹೋಗಿ ಈ ಶಾಸನ ಸಭೆಯೊಳಗೆ ಯಾವುದೇ ರೀತಿಯಾದಂಥ ಒಂದು ವಿರೋಧಗಳಿಲ್ಲದೆ, ವಿಘಟನೆಗಳು ಇಲ್ಲದೆ, ಘಟನಾವಳಿಯನ್ನು ನಾವು ಮಾಡಿದ್ದೇವೆ. ಅಂಥ ಘಟನಾವಳಿಯನ್ನು ಮತ್ತೆ ನೀವು ಬದಲಾಯಿಸಿದರೆ ಹೇಗೆ? ಬದಲಾಯಿಸಬೇಕಾಂದಿದ್ದರೆ ಬದಲಾಯಿಸಿ? ಅದಕ್ಕೆ ಎರಡು ವರ್ಷಗಳ ಕಾಲ ಅವಕಾಶ ಇತ್ತು, ಆದರೆ ನೀವು ಮಾಡಲಿಲ್ಲ. ಅದಕಾರಣ ಈಗ ಇರತಕ್ಕಂಥ ಶಾಸನವನ್ನು ಜಾರಿಗೆ ಕೊಡತಕ್ಕಂಥಾದ್ದರಲ್ಲಿ ನಿಮಗೆ ಇರುವ ತೊಂದರೆ ಏನಿದೆ ಎಂಬುದನ್ನು ಹೇಳಿ? ಮುಂದೆ ಅಮೆಂಡ್‌ಮೆಂಟ್ ಮಾಡುತ್ತೇವೆ, ಕಾನ್ಸಿಟ್ಯೂಷನ್ ಅಮೆಂಡ್‌ಮೆಂಟ್ ಬರುತ್ತದೆ ಎಂದರೆ ಹೇಗೆ? ಮುಂದೆ ಏನಾಗುತ್ತದೋ ಗೊತ್ತಿಲ್ಲ, ನಾವು ಕೂಡ ನಮ್ಮ ಸರಕಾರ ಇನ್ನೂ ಇರುತ್ತದೆ ಕೇಂದ್ರದಲ್ಲಿ ಎಂದು ತಿಳಿದುಕೊಂಡಿದ್ದೆವು. ಆದರೆ ಅದು ಹೋಗಿ ಈಗ ಹೊಸ ಸರಕಾರ ಬಂದಿದೆ, ಅದೂ ಕೂಡ ಬಿದ್ದು ಹೋಗುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಮುಂದೆ ಏನಾಗುತ್ತದೋ ಎಂಬ ಬಗ್ಗೆ ನನಗೆ ಆಸಕ್ತಿ ಇಲ್ಲ, ಇರುವ ಶಾಸನದಂತೆ ನೀವು ಚುನಾವಣೆ ಮಾಡುತ್ತೀರೋ ಇಲ್ಲವೋ?

SRI K.H. PATIL : Time limit is the only difficulty : To avoid the time-limit, we will have to go in for an Ordinance or again come before the Session next.

ಶ್ರೀ ಎಂ.ವಿ. ವೆಂಕಟಪ್ಪ : ರಾಜ್ಯಾಂಗ 64ನೇ ವಿಧಿಯ ತಿದ್ದುಪಡಿ ರಾಜ್ಯ ಸಭೆಯಲ್ಲಿ ಏನು ಬಿದ್ದುಹೋಯಿತು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸಚಿವರು ಬಹಳ ಹಿರಿಯರು, ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. He has also shared his views with the press..

ಶ್ರೀ ವಾಟಾಳ್ ನಾಗರಾಜ್ : ಏನೆಂದು ಹೇಳಿದ್ದಾರೆ ಸ್ಪಷ್ಟವಾಗಿ ಚುನಾವಣೆ ಮುಂದಕ್ಕೆ ಹೋಗುತ್ತದೆ ಎಂದು ಹೇಳಿದ್ದಾರೆ.

(ಗೊಂದಲ)

ನಾಳೆ ಬೆಳಿಗ್ಗೆ ಚುನಾವಣೆ ನಡೆಸುತ್ತೇವೆ ಎಂದು ಹೇಳಲು ಆಗುವುದಿಲ್ಲ. ಇದು ಕತ್ತುಹಿಸುಕುವ ವಿಚಾರ, ಅವರ ಬಗ್ಗೆ ಬಹಳ ಗೌರವ ಇಟ್ಟುಕೊಂಡಿದ್ದೇವೆ, ಅವರು ಒಬ್ಬ ಹಿರಿಯ ಸಚಿವರು.

(ಗೊಂದಲ)

ಹಾಗಾದರೆ ಆಡಳಿತಾಧಿಕಾರಿಯನ್ನು ನೇಮಿಸುವುದಿಲ್ಲ, ಚುನಾಯಿತ ಪ್ರತಿನಿಧಿಗಳನ್ನು ಮುಂದುವರೆಸುತ್ತೇವೆಂದು ಹೇಳಿ ನೀವು, ನೋಡೋಣ. ನಾನು ಜಿಲ್ಲಾಪರಿಷತ್ ಇರಬೇಕನ್ನುವವನು, ನೀವು ಮುಚ್ಚುವುದಾದರೆ ಮುಚ್ಚಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ ವಿವಾದಕ್ಕೆ ಆಸ್ಪದವಿಲ್ಲ. ಏಕೆಂದರೆ ಸಚಿವರೂ ಕೂಡ ಸ್ಪಷ್ಟಪಡಿಸಿದ್ದಾರೆ, ಈಗಿರುವ ಶಾಸನ ಬದಲಾವಣೆಯಾಗ ಬೇಕಾದರೆ ಅದಕ್ಕೆ ಈ ಸದನ ಒಪ್ಪಬೇಕು, ಬದಲಾವಣೆ ಆಗತ್ಯವಿಲ್ಲ ಎಂದು ತಾವು ಹೇಳುತ್ತೀರಿ, ಆಗತ್ಯ ಇದೆಯೋ ಇಲ್ಲವೋ ಎಂದು ಈ ಸದನ ಹೇಳಬೇಕಾಗುತ್ತದೆ. ತಮಗೆ ಗೊತ್ತಿದೆ, ಡಿಸೆಂಬರ್‌ನೊಳಗೆ ನಾವು ಖಂಡಿತ ಪುನಃ

ಸಭೆ ಸೇರುತ್ತೇವೆ. ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ ಅವರ ಇಲಾಖೆಯ ಮಟ್ಟಿಗೆ ಇದಕ್ಕೆ ಒಂದು ರೀತಿಯ ಅಂತಿಮ ಸ್ವರೂಪ ಕೊಟ್ಟಿದ್ದೇವೆಂದು. ಸ್ಪಷ್ಟಪಡಿಸಿದ್ದಾರೆ. ಆ ಅಂತಿಮ ಸ್ವರೂಪ ಶಾಸನರೂಪದಲ್ಲಿ ಈ ಸದನಕ್ಕೆ ಬರಬೇಕಾಗಿದೆ. ಬಿಸ್‌ನೆಸ್ ರೂಲ್ಸ್ ಪ್ರಕಾರ ಕೆಲವು ಪ್ರೊಸಿಜರ್ ಇವೆ, ಲಾ ಇಲಾಖೆಗೆ ಹೋಗಬೇಕು. ಒಂದನ್ನು ತಾವು ಮೆಚ್ಚಬೇಕು. ಸನ್ಮಾನ್ಯ ಹಿರಿಯ ಸಚಿವರು ಏನು ಸ್ವರೂಪ ಕೊಡಬೇಕೆಂದಿದ್ದಾರೋ ಅದರ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿಕೊಂಡಿದ್ದಾರೆ. ಇವತ್ತಿನವರೆಗೂ ನಮ್ಮ ಸರ್ಕಾರ ಈ ಶಾಸನವನ್ನು ಬದಲಾವಣೆ ಮಾಡಬೇಕೆಂದು ಹೇಳಿ ನಿರ್ಣಯ ತೆಗೆದುಕೊಳ್ಳಲಿಲ್ಲ. ಇಲಾಖೆ ಮಟ್ಟಿಗೆ ಅವರು ಕೆಲವು ಸೂಚನೆ ಕೊಟ್ಟಿದ್ದಾರೆ. ಆ ನಿರ್ಣಯ ತೆಗೆದುಕೊಳ್ಳುವವರೆಗೆ ಈ ಶಾಸನವೇ ಇರುತ್ತದೆ. ಈ ಶಾಸನದ ಪ್ರಕಾರ ಒಂದು ಟೈಮ್ ಇರುತ್ತದೆ. ಆ ಟೈಮ್ ಆದ ಮೇಲೆ ಚುನಾವಣೆಯಾಗಬೇಕು. Thatstandsಆದ್ದರಿಂದ ಸರ್ಕಾರವೇನೂ ಚುನಾವಣೆಯನ್ನು ಮುಂದೂಡಬೇಕೆಂದಿಲ್ಲ. ಸಧ್ಯಕ್ಕೆ ಈಗಿರುವ ಶಾಸನವನ್ನೇ ನಾವು ಅನುಷ್ಠಾನ ಮಾಡಬೇಕಾದ ಸಂದರ್ಭ ಇದೆ. ಅದು ಇದ್ದೇ ಇದೆ, ನಾವು ಬದಲಾವಣೆ ಮಾಡುವವರೆಗೆ ಆ ಶಾಸನದ ಪ್ರಕಾರ ನಾವು ನಡೆಯಬೇಕು. ಅದು ನಮ್ಮ ಕರ್ತವ್ಯ. ಬದಲಾವಣೆಯಾಗಬೇಕೆಂದರೆ, Yes, share some views, nothing wrong, ಹಿರಿಯ ಸಚಿವರು ಪ್ರಾಮಾಣಿಕವಾಗಿ ಅವರ ಅನಿಸಿಕೆಗಳನ್ನು ತಮ್ಮ ಜೊತೆಯಲ್ಲಿ ಹಂಚಿದ್ದಾರೆ.

ಅಂದಮಾತ್ರಕ್ಕೆ ಒಂದು ಕ್ಯಾಬಿನೆಟ್ ಆಗಲೀ ಅಥವಾ ಒಂದು ಸರ್ಕಾರವಾಗಲಿ ಇದರ ಬಗ್ಗೆ ಒಂದು ಅಂತಿಮವಾದ ನಿರ್ಣಯವನ್ನು ತೆಗೆದುಕೊಂಡಿದ್ದಾರೆ, ಚುನಾವಣೆಯನ್ನು ಮುಂದೆ ಹಾಕುವುದಕ್ಕೆ, ಚುನಾವಣೆಯನ್ನು ಮಾಡಬಾರದು ಅಥವಾ ಸುಗ್ರೀವಾಜ್ಞೆಯನ್ನು ಕೊಡಬೇಕು, ಆಡಳಿತಾಧಿಕಾರಿಗಳನ್ನು ನೇಮಕ ಮಾಡಬೇಕು ಎಂಬ ಯಾವುದೇ ಸರ್ಕಾರ ಆದೇಶವನ್ನು ನಾವು ತೆಗೆದುಕೊಂಡಿಲ್ಲ, ತೆಗೆದುಕೊಳ್ಳುವುದು ಇದ್ದರೆ ತಾವು ಹೇಳತಕ್ಕಂಥ ಅಕ್ಷೇಪಕ್ಕೆ ನಾನು ಒಪ್ಪುತ್ತೇನೆ. ಆದರೆ ನಾವು ತೆಗೆದುಕೊಂಡಿಲ್ಲ, ಅವರು ಹೇಳುತ್ತಿದ್ದಾರೆ, ನಾವು ಮುಂದೆ ಸಭೆಯನ್ನು ಕರೆಯುತ್ತೇವೆ, ಈ ಸದನದಲ್ಲಿ ತರಬೇಕು ಎಂಬ ಪ್ರಾಮಾಣಿಕವಾದ ಒಂದು ಅಪೇಕ್ಷೆ ಇತ್ತು. ಅದರೆ ಕೆಲವು ಪ್ರೊಸೀಜರ್ಸ್ ಇದೆ. ಕಾನೂನನ್ನು ತರಬೇಕಾದರೆ ಬೇರೆ ಬೇರೆ ಇಲಾಖೆಗಳಿಗೆ ಹೋಗಬೇಕಾಗುತ್ತದೆ. ಅದು ಕಾನೂನು ಇಲಾಖೆಗೆ ಹೋಗಬೇಕಾಗುತ್ತದೆ. ಸ್ಕ್ರುಟಿನಿ ಕಮಿಟಿಗೆ ಹೋಗಬೇಕಾಗುತ್ತದೆ. ಕ್ಯಾಬಿನೆಟ್‌ಗೆ ಹೋಗಬೇಕಾಗುತ್ತದೆ. ಅವೆಲ್ಲಾ ಹೋದ ಮೇಲೆ ಇದು ಆಗುತ್ತದೆ. ಹೀಗಿರುವಾಗ ಇನ್ನು ಇದಕ್ಕೆ ಬಹುಶಃ ಪೂರ್ಣ ವಿರಾಮವನ್ನು ಕೊಟ್ಟು ಶಾಸನಾತ್ಮಕವಾಗಿ ಈಗಿನ ಕಾನೂನು ಏನು ಇದೆಯೋ, ಆ ಪ್ರಕಾರ ಸರ್ಕಾರಕ್ಕೆ ಬಿಡುವುದು ಒಳ್ಳೆಯದು ಎಂದು ಹೇಳುತ್ತೇನೆ.

MR. DEPUTY SPEAKER : I think we will close this matter.

ಶ್ರೀ ಡಿ.ಬಿ. ಚಂದ್ರೇಗೌಡ : ರೆವಿನ್ಯೂ ಇಲಾಖೆಗೆ ಸ್ವರೂಪ ಕೊಡುವುದಕ್ಕೆ ಹೋಗಿ ಅವರ ಸ್ವರೂಪ ಕೆಟ್ಟು ಸಹಕಾರ ಇಲಾಖೆಗೆ ಬಂದರು. ಸಹಕಾರ ಇಲಾಖೆಗೆ ಸ್ವರೂಪವನ್ನು ಕೊಡುವುದಕ್ಕೆ ಹೋಗಿ ಅದು ಕೆಟ್ಟು ಇಲ್ಲಿಗೆ ಬಂದಿದ್ದಾರೆ. ಮತ್ತೆ ಇದಕ್ಕೆ ಸ್ವರೂಪವನ್ನು ಕೊಡುವುದಕ್ಕೆ ಹೋಗಿ, ಅವರಿಗೆ ಒಂದು ಕಿವಿ ಮಾತನ್ನು ಹೇಳುತ್ತೇನೆ, ಮತ್ತೆ ಅವರು ಕೆಡುವುದು ಬೇಡ. ಮಾನ್ಯ ಕೆ.ಹೆಚ್. ಪಾಟೀಲರೇ, ತಮ್ಮಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ, ಕಂದಾಯ ಇಲಾಖೆಗೆ

ಸ್ವರೂಪವನ್ನು ಕೊಡುವುದಕ್ಕೆ ಹೋಗ್ಬೇಕು ಅದು ಹಸ್ತಾಂತರವಾಯಿತು. ಸಹಕಾರ ಇಲಾಖೆಗೆ ಸ್ವರೂಪವನ್ನು ಕೊಡುವುದಕ್ಕೆ ಹೋಗಿ ನಿಮ್ಮ ಸ್ವರೂಪವೇ ಕೆಡ್ತು. ಮತ್ತೆ ಇದಕ್ಕೆ ಸ್ವರೂಪವನ್ನು ಕೊಡುವುದಕ್ಕೆ ಹೋಗಿ ಮತ್ತೆ ಕೆಡುವ ಬದಲು ಇರುವ ಶಾಸನದಲ್ಲಿಯೇ ನೀವು ಚುನಾವಣೆಯನ್ನು ಮಾಡುತ್ತೇವೆ ಎಂದು ಹೇಳಿ ಎಂದು ತಮಗೆ ಕಿವಿ ಮಾತನ್ನು ಹೇಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ವಿರೋಧ ಪಕ್ಷದ ನಾಯಕರ ಮನಸ್ಸಿನಲ್ಲಿ ಗೌರವ ಇದೇ ನಮ್ಮ ವಿರೋಧ ಪಕ್ಷದ ನಾಯಕರಲ್ಲಿ ವಿರೋಧ ಪಕ್ಷದ ಸದಸ್ಯರಲ್ಲಿ ಸಹಿತ ನಮ್ಮ ಪಕ್ಷದವರಲ್ಲಿ ಇದ್ದಷ್ಟೇ ಗೌರವ ಹೆಚ್ಚಾಗಿರುವಾಗ ನನಗೆ ಯಾವ ಹುದ್ದೆಗೆ ತೆಗೆದುಕೊಂಡರೇನು? ಬಿಟ್ಟಿಡಿಕೆ ಏನು? ಎಲ್ಲಿದ್ದರೂ ನಾನು ಕೆಲಸ ಮಾಡುವವನು I am one of the workers and not a Leader.

ಶ್ರೀ ವಿ.ಪಿ. ವೆಂಕಟಪ್ಪ : ಈಗ ಏಕಸ್ಮಾತ್ ಅಡ್ವಿನಿಸ್ಟ್ರೇಟರನ್ನು ಹಾಕುತ್ತೀರಿ ಜಿಲ್ಲಾ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಮಂಡಲಪಂಚಾಯಿತಿಯ ಮಟ್ಟದಲ್ಲಿ ಹಾಕುತ್ತೀರಿ. ಆ ರೀತಿಯಲ್ಲಿ ಹಾಕಿದ್ದಾಗ ಈಗ ತಾಲ್ಲೂಕು ಸಮಿತಿಗಳು ಇದೆ. 175 ರವಿನ್ಯೂ ತಾಲ್ಲೂಕುಗಳಲ್ಲಿ 175 ಸಮಿತಿಗಳು ಇವೆ. ಲೋಕಲ್ ಲೆಜಿಸ್ಲೇಟರ್ಸ್ ಯಾವುದೇ ಪಕ್ಷದವರಾದರೂ ಅಲ್ಲಿ ಅಧ್ಯಕ್ಷರಾಗಿದ್ದಾರೆ. ಮಂಡಲ ಪ್ರಧಾನರು ಹೋದಮೇಲೆ ತಾಲ್ಲೂಕು ಸಮಿತಿಯೂ ಹೊರಟುಹೋಗುತ್ತದೆ. ಆಗ ತಾಲ್ಲೂಕು ಅಧ್ಯಕ್ಷರ ಸ್ಟೇಟಸ್ ಏನು ? ಈಗಾಲಾದರೂ ನೀವು ಎಲ್ಲ...

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲ ಮತ್ತು ಮಲೆನಾಡು ಅಭಿವೃದ್ಧಿ ಮಂಡಲ ಬಿಲ್ಲುಗಳನ್ನು ತರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ.

ಶ್ರೀ ಕೆ.ಹೆಚ್. ಪಾಟೀಲ್ : ಕ್ಯಾಬಿನೆಟ್‌ನವರು ಆರ್ಡಿನೆನ್ಸ್‌ನ್ನು ಹೊರಡಿಸಬೇಕು ಎಂದು ಹೇಳಿದರೆ ಅದನ್ನು ಇಡುತ್ತಾರೆ. ಆದರೆ ಇವತ್ತು ಹೇಗೆ ಅದನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ?

SRI M. VEERAPPA MOILY : We are going on a hypothetical question. It is absolutely hypothetical.

ಉಪಾಧ್ಯಕ್ಷರಿಣಿಯವರು : ಇತಕ್ಕೊಂದರಲ್ಲಿ ಇದು ಚರ್ಚೆ ಮಾಡತಕ್ಕಂಥ ವಿಷಯವಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಆ ಹೇಳಿಕೆಯನ್ನು ಮಾಡಿ ಸ್ಪೆಷಿಫಿಕ್ ಆಗಿ ಹೇಳಿದ್ದಾರೆ. ನಾವು ಅಮೆಂಡ್‌ಮೆಂಟ್ ಮಾಡಬೇಕಾಗಿದೆ. ಅಮೆಂಡ್‌ಮೆಂಟ್‌ನ್ನು ಈ ಸದನದಲ್ಲಿ ತರುವುದಕ್ಕೆ ಆಗಲಿಲ್ಲ. ಅದುದರಿಂದ ನಾವು ಆಡ್ವಿನಿಸ್ಟ್ರೇಟರನ್ನು ಹಾಕಬೇಕಾಗುತ್ತದೆ ಎಂದು ಸ್ಪೆಷಿಫಿಕ್ ಆಗಿ ಹೇಳಿದ್ದಾರೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ತಮ್ಮ ಸರ್ಕಾರ ಅಧಿಕಾರಿಕ್ಕೆ ಬಂದಾಗ ಎರಡು ಎರಡೂವರೆ ವರ್ಷಗಳ ಅವಧಿ ಜಿಲ್ಲಾಪರಿಷತ್ತುಗಳಿಗಿತ್ತು. ಬಹಳ ಜನರು ಜಿಲ್ಲಾ ಪರಿಷತ್ತುಗಳು ನಮ್ಮ ಪಕ್ಷಗಳ ಅಧೀನದಲ್ಲಿಯೇ ಇದ್ದವು. ನಿಮಗೆ ಹೊಟ್ಟೆಉರಿ ಇತ್ತು. ಏನಾದರೂ ಚಮತ್ಕಾರ ಮಾಡಿ ಇದನ್ನು ಕಿತ್ತುಕೊಳ್ಳಬೇಕು ಎಂದು ಈಗ ಮೂರು ತಿಂಗಳು ಇದೆಯೆಲ್ಲಾ ಈ ಮೂರು ತಿಂಗಳಲ್ಲಿ ನಿಮಗೆ ಗೆಲ್ಲುವುದಕ್ಕೆ ಧೈರ್ಯವಿಲ್ಲವೇ? ನೀವು ಎಲೆಕ್ಷನ್‌ಗೆ ಬನ್ನಿ. ಅದನ್ನು ಬಿಟ್ಟು ನೀವು ಏತಕ್ಕೆ ನಮಗೆ ಕ್ರಮೋಸ

ಮಾಡುವುದಕ್ಕೆ ಹೊರಟಿದ್ದೀರಿ? ಇವತ್ತು ಸಂಸ್ಥೆಗಳಲ್ಲಿ ಸರ್ವನಾಶವಾಗಿದೆ. ಈಗ ನೀವು ಸಹಕಾರಿ ರಂಗದಲ್ಲಿ ಅವರ ಮಾತನ್ನು ಕೇಳಿ ನೀವು ಮಾಡಿದ್ದೀರಿ, ಹೇಗೆ ಸರ್ವನಾಶವಾಗಿದೆ, ಇಡೀ ಜಿಲ್ಲಾ ಪರಿಷತ್ತುಗಳು ಮತ್ತು ಮುಂಡಗೋಡು ತಾಲ್ಲೂಕುಗಳು ಸರ್ವನಾಶವಾಗಿದೆ.. ಅಡ್ಮಿನಿಸ್ಟ್ರೇಟರನ್ನು ಹಾಕಿದರೆ ಇರುವುದನ್ನು ತಿಂದುಹ್ಹಾಕುತ್ತಾರೆ. ಮ್ಮೂರು ಕಾಸಿನ ಕೆಲಸವೂ ಆಗುವುದಿಲ್ಲ. ಕಾಂಗ್ರೆಸ್ ದಲ್ಲಾಳಿಗಳಿಗೆ ಇದು ಅನುಕೂಲವಾಗುತ್ತದೆಯೇ ವಿನಹಃ ಜನಗಳಿಗೆ ಪ್ರಯೋಜನವೇನೂ ಆಗುವುದಿಲ್ಲ. ಇದನ್ನು ನಾವು ವಿರೋಧ ಮಾಡುತ್ತೇವೆ. ನಿಮಗೆ ಧೈರ್ಯ ಇದ್ದರೆ, ಡಿಸೆಂಬರ್ ಜನವರಿಯಲ್ಲಿ ಎಲೆಕ್ಷನ್ನನ್ನು ಮಾಡಿ ನೀವು ಪುನಃ ಗೆದ್ದುಬನ್ನಿ. ನೀವು ಇದರಿಂದ ಬಹಳ ಅನ್ಯಾಯಮಾಡುತ್ತಿದ್ದೀರಿ. ನಮಗೆ ಅರ್ಥವಾಗುವುದಿಲ್ಲ.

ಉಪಾಧ್ಯಕ್ಷಣಿಯವರು : ಇನ್ನು ಈ ವಿಷಯದ ಬಗ್ಗೆ ಚರ್ಚೆ ಬೇಡ, ಈಗಾಗಲೇ ಸುಕಷ್ಟು ಜನ ಮಾತನಾಡಿದ್ದಾರೆ. ಈಗ ಮಾನ್ಯ ವಿಕಾಂತಯ್ಯನವರನ್ನು ನಾನು ಕರೆದಿದ್ದೇನೆ, ಅವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷಣಿಯವರೇ ತಮ್ಮಲ್ಲಿ...

ಉಪಾಧ್ಯಕ್ಷಣಿಯವರು : ಈಗ ಯಾವ ಸಾಕಷ್ಟು ಸಲ ಅದನ್ನೇ ಹೇಳಿದ್ದೀರಿ, ಹೇಳಿದ್ದೇ ಹೇಳುವುದರಲ್ಲಿ ಏನು ಅರ್ಥ ಇದೆ. ನೀವು ಇದರ ಬಗ್ಗೆ ಹೇಗಾಗಬಹುದು, ಹಾಗಾಗಬಹುದೆಂದು ಚರ್ಚೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ : ನಾಳೆ ದಿವಸ ಈ ಸಭೆಯು ಮುಗಿಯುತ್ತದೆ.

ಉಪಾಧ್ಯಕ್ಷಣಿಯವರು : ಈಗ ಶ್ರೀ ವಿಕಾಂತಯ್ಯನವರು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ನೀವು ಯಾವಾಗಲೂ ಕೊಟ್ಟ ಉತ್ತರವನ್ನೇ ಕೊಡುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಇಡೀ ದಿವಸವು ವಾಟಾಳ್ ನಾಗರಾಜ್‌ರವರೇ ಮಾತನಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಣಿಯವರು : ತಾವು ದಯವಿಟ್ಟು ಸಹಕಾರ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು : ಮಾನ್ಯ ವಿಕಾಂತಯ್ಯನವರು ಮಾತನಾಡುವುದಿಲ್ಲ ಅಂದರೆ ನಾವು ಮುಂದೆ ಯಾರನ್ನಾದರೂ ಕರೆಯಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊತ್ತಿದ್ದೇನೆ. ನಾಳೆ ಕಾಸನ ಸಭೆಯು ಮುಗಿಯುತ್ತದೆ.

ಉಪಾಧ್ಯಕ್ಷಣಿಯವರು : ನೀವು ಹೇಳಿದ್ದೀರಿ, ಅವರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಮತ್ತೆ ಅದನ್ನೇ ಹೇಳುವುದರಲ್ಲಿ ಏನು ಅರ್ಥವಿದೆ.

ಶ್ರೀ ವಾಟಾಳ್ ನಾಗರಾಜ್ : ನಾಳೆ ಕಥೆ ಮುಗಿಯುತ್ತದೆ, ಜಿಲ್ಲಾಪರಿಷತ್ತಿನ ಕಥೆಗೆ ಚರಮಗೀತೆಯನ್ನು ಹಾಡುತ್ತಿದ್ದಾರೆ. ಅದರ ಹಣೆಬರಹ ಮುಗಿಯುತ್ತದೆ. ಸರ್ಕಾರದ ಈ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದರೂ, ಇವರ ಪರಿಸ್ಥಿತಿ ನಾಳೆ ಏನಾಗುತ್ತದೆ ಎಂಬುದು ನನಗೆ ಗೊತ್ತಿದೆ. ನಾಳೆ ಅದಕ್ಕೆ ಒಂದು ಅಂತಿಮ ಪರದೆಯನ್ನು ಎಳೆಯುತ್ತಾರೆ. ಅದರ ಕಥೆಯನ್ನು ಮುಗಿಸುತ್ತಾರೆ.

ಅದಕ್ಕೆ ಸರ್ಕಾರ ಏನಾದರೂ ಒಂದು ನಿರ್ಧಾರಕ್ಕೆ ಬಂದು ಚುನಾವಣೆಯನ್ನು ಮಾಡುತ್ತೇವೆಂದು ಹೇಳಬೇಕಲ್ಲಾ.

ಉಪಾಧ್ಯಕ್ಷಣಿಯವರು : ಅವರು ಏನು ಉತ್ತರ ಕೊಡಬೇಕೋ ಅದನ್ನು ಕೊಟ್ಟಿದ್ದಾರೆ.

ಜಲಮಾಲಿನ್ಯ ನಿವಾರಣೆ ಬಗ್ಗೆ ಮಂಡಿಸಿರುವ ಶಾಸನಾತ್ಮಕ ನಿರ್ಣಯದ ಮೇಲೆ ಚರ್ಚೆ :

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಶಾಸನಾತ್ಮಕ ನಿರ್ಣಯ. ಏನಿದೆ ರಾಜ್ಯದಲ್ಲಿ ಜಲಮಾಲಿನ್ಯವನ್ನು ತಡೆಗಟ್ಟಲಿಕ್ಕೆ ನಿಯಂತ್ರಣ ಹಾಗೂ ಶುದ್ಧ ಜಲವನ್ನು ಯಥಾಸ್ಥಿತಿಯಲ್ಲಿರುವ ಹಾಗೂ ಉಳಿಸಿಕೊಂಡು ಬರುವುದಕ್ಕೆ ಸಂಬಂಧಿಸಿದಂತಹ ಜನಮಾಲಿನ್ಯ ನಿವಾರಣೆ ಹಾಗೂ ಅಧಿನಿಯಮ ಏನಿದೆ ಅದಕ್ಕೆ ತಿದ್ದುಪಡಿಯನ್ನು ಈಗಾಗಲೇ ತಂದಿದ್ದಾರೆ. ಆ ತಿದ್ದುಪಡಿಯನ್ನು ರಾಜ್ಯ ಸರ್ಕಾರವು ಸಹ ಅಂಗೀಕರಿಸಬೇಕೆಂದು ಈ ಸದನ ಈಗ ನಿರ್ಣಯಿಸಬೇಕಾಗಿದೆ. ಈ ಒಂದು ನಿರ್ಣಯವನ್ನು ಹಿಂದೆ ಮಂಡಿಸಿದಾಗ ನಾವು ಕೆಲವು ಆಕ್ಷೇಪಗಳು ಎತ್ತಿದ್ದೆವು. ಮಾನ್ಯ ಸಚಿವರು ನಮ್ಮ ಆಕ್ಷೇಪಣೆಗಳನ್ನು ಒಪ್ಪಿಕೊಂಡು, ಸಂಬಂಧಪಟ್ಟ ವಿಧೇಯಕದ ಪ್ರತಿಯನ್ನು ಹಾಗೂ ಈ ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾದಂತಹ ನಡವಳಿಕೆಯ ಪ್ರತಿಯನ್ನೂ ಸಹ ಕಳುಹಿಸಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗ ಇದರ ಬಗ್ಗೆ ಕೆಲವೇ ನಿಮಿಷಗಳಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲ. ಸ್ವಲ್ಪ ಹೆಚ್ಚು ವಿಚಾರವನ್ನು ಪ್ರಸ್ತಾವ ಮಾಡಬೇಕಾಗಿದೆ. ಅದನ್ನು ಮಾನ್ಯ ಮಂತ್ರಿಗಳೂ ಸಹ ಬಯಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಷ್ಟ್ರದಲ್ಲಿ ಮೂರು ಮುಖ್ಯವಾದಂತಹ ಮಾಲಿನ್ಯ ನಿವಾರಣೆ ಮತ್ತು ತಡೆಗಟ್ಟಲಿಕ್ಕೆ ಸಂಬಂಧಪಟ್ಟಂತೆ ಮೂರು ವಿಧೇಯಕಗಳು ಇವೆ. ಮೊಟ್ಟಮೊದಲನೆಯದಾಗಿ, ಪರಿಸರವನ್ನು ಸಂರಕ್ಷಣೆ ಮಾಡಲಿಕ್ಕೆ Environment Protection Act ಏನಿದೆ ಅದು ಈಗಾಗಲೇ ಜಾರಿಯಲ್ಲಿದೆ. Air Prevention & Control of Pollution Act ಈಗಾಗಲೇ ಜಾರಿಯಲ್ಲಿದೆ. ಅದೇ ರೀತಿಯಾಗಿ ಜನಮಾಲಿನ್ಯ ನಿವಾರಣೆಯ ಹಾಗೂ ನಿಯಂತ್ರಣ ಕಾನೂನು ಸಹ ಜಾರಿಯಲ್ಲಿದೆ. ಈ ಮೂರು ವಿಧೇಯಕಗಳ ಮೂಲ ಉದ್ದೇಶ ಒಂದೇ ನಮ್ಮಲ್ಲಿ ಆಗುವಂತಹ ಮಾಲಿನ್ಯವನ್ನು ತಪ್ಪಿಸಬೇಕು, ಮತ್ತು ಇದರಿಂದ ತೊಂದರೆಗೆ ಒಳಗಾದಂತಹ ಜನರನ್ನು ತೊಂದರೆಯಿಂದ ತಪ್ಪಿಸಬೇಕೆಂಬುದು ಆಗಿರುತ್ತದೆ. ಈ ಉದ್ದೇಶವನ್ನು ಕಂಡುಕೊಂಡು 1974ರಲ್ಲಿ ಸಂವಿಧಾನದ 252 ಅನುಚ್ಛೇದದ ಪ್ರಾಕರ ಜಾರಿಗೆ ಬಂತು. ಆಗ ಎರಡ ರಾಜ್ಯಗಳಿಗಿಂತ ಹೆಚ್ಚಾಗಿ ಇಂತಹ ಒಂದು ಅಧಿನಿಯವನ್ನು ರಚಿಸಬೇಕು ಮತ್ತು ಜಾರಿಗೆ ತರಬೇಕೆಂದು ವಿನಂತಿಸಿಕೊಂಡಿದ್ದರ ಮೇಲೆ ಈ ಅಧಿನಿಯಮ ಜಾರಿಗೆ ಬಂತು.

1988ರಲ್ಲಿ ಕೆಲವೊಂದು ರಾಜ್ಯಗಳು ಈ ಬಗ್ಗೆ ಇರುವಂಥ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ, ಅಡಳಿತಾತ್ಮಕವಾದ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ತಿದ್ದುಪಡಿ ಬೇಕೆಂದು ಸೂಚನೆ ಮಾಡಿದ್ದದರಿಂದ ಕೇಂದ್ರ ಸರ್ಕಾರ 1988 ರ ಕೇಂದ್ರದ ಅಧಿನಿಯಮದ ಮುಖಾಂತರ ಕೆಲವು ತಿದ್ದುಪಡಿಗಳನ್ನು ಜಾರಿಗೆ ತಂದರು. 1988ರಲ್ಲಿ ಜಾರಿಗೆ ಬಂದಾಗ್ಯೂ ಸಹ, ಮೂರು ವರ್ಷಗಳ ಕಾಲ ಕರ್ನಾಟಕ ರಾಜ್ಯ ಸರ್ಕಾರ ಸದರಿ ತಿದ್ದುಪಡಿ ವಿಧೇಯಕವನ್ನು